	1	2 3
72)	ಗುಡಿಕೇಶ್ವರ	ಚಿಂಚೋಳಿ
73)	ಕೊಂಡಗೂಳಿ	ಜೇವರ್ಗಿ
74)	ಬಿದನೂರ	ಅಫಜಲ್‌ಪುರ
75)	ಪುಟಪಾಕ	ಯಾದಗಿರಿ
76)	ಬಾಯಿದೊಡ್ಡಿ	ರಾಯಚೂರು
77)	ಹುಣಸಿಹಾಳ್	ಯಲ್ಬುರ್ಗಾ
78)	ಮಾಚನೂರು	ಮಾನ್ವಿ
79)	ಕೂಡುಬಿದರಹಾಳು	ಸಿರಗುಪ್ಪ
80)	ಉತ್ತಂಗಿ	ಹಡಗಲಿ
81)	ವಣ್ಣೇನೂರು	ಬಳ್ಳಾರಿ
82)	ಹಿರೇಮಲ್ಲನಕೇರಿ	ಹಡಗಲಿ
83)	ಹಗ್ಡಾಪುರ	ಔರಾದ್
84)	ಯರನಹಳ್ಳಿ	ಬೀದರ್

ಲೋಕ್ ಆದಾಲತ್‌ನಲ್ಲಿ ಮೊಕದ್ದಮೆಗಳ ವಿಲೇವಾರಿ

2019 - ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ರಚನೆ, ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ನ್ಯಾಯಾಲಯಗಳಲ್ಲಿ ಲೋಕ್ ಅದಲಾತ್ ಕಾರ್ಯಕ್ರಮದಲ್ಲಿ ಮೊಕದ್ದಮೆಗಳ ಇತ್ಯರ್ಥವಾಗುತ್ತಿದೆಯೇ?*

ಆ) *1996-97ನೇ ಸಾಲಿನಲ್ಲಿ ಮತ್ತು 1997-98ರ ಸಾಲಿನಲ್ಲಿ ಈ ತನಕ ಅದಾಲತ್ ಕಾರ್ಯಕ್ರಮದಲ್ಲಿ ಇತ್ಯರ್ಥವಾಗದ ಮೊಕದ್ದಮೆಗಳೆಷ್ಟು?*

ಶ್ರೀ ಎಂ. ಸಿ. ನಾಣಯ್ಯ (ಕಾನೂನು, ಸಂಸದೀಯ, ವ್ಯವಹಾರಗಳು ಮತ್ತು ಶಾಸನ ರಚನೆ ವಾರ್ತಾ ಮತ್ತು ಪ್ರಚಾರ ಸಚಿವರು) :

ಅ) ಹೌದು.

ಅ) ವರ್ಷ	ನಡೆದ ಲೋಕ್ ಅದಾಲತ್‌ಗಳ ಒಟ್ಟು ಸಂಖ್ಯೆ	ಇತ್ಯರ್ಥವಾದ ಮೊಕದ್ದಮೆಗಳು
1996-97	487	17,492
1997-98	17	780
	(1-4-1997 ರಿಂದ 31-7-1997)	

ಕುಣಿಗಲ್ ಮತ್ತು ತುಮಕೂರು ಲೋಕೋಪಯೋಗಿ ಇಲಾಖೆಯ ರಸ್ತೆಗಳ ಅಭಿವೃದ್ಧಿ

2020 - ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಣಿಗಲ್ ಮತ್ತು ತುಮಕೂರು ಮಧ್ಯೆ ಇರುವ ರಾಜ್ಯ ಹೆದ್ದಾರಿ ಕೆ.ಕೆ. ರಸ್ತೆಯನ್ನು ಅಗಲಪಡಿಸುವ ಮತ್ತು ಅಭಿವೃದ್ಧಿ ಪಡಿಸುವ ಕಾರ್ಯದಲ್ಲಿ ಇದುವರೆಗೆ ಸಾಧಿಸಿರುವ ಪ್ರಗತಿಯೇನು?

ಆ) ಈ ಕಾರ್ಯಕ್ರಮದ ವಿಳಂಬಕ್ಕೆ ಕಾರಣವೇನು? ಮತ್ತು ಪೂರ್ಣಗೊಳಿಸಲು ಹಾಕಿಕೊಂಡಿರುವ ಯೋಜನೆಗಳೇನು?

ಇ) ಈ ಕಾರ್ಯಕ್ರಮ ಪೂರ್ಣಗೊಳಿಸಲು ಸರ್ಕಾರವು ಹಾಕಿಕೊಂಡಿರುವ ಯೋಜನೆ ಏನು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಸದರಿ ರಸ್ತೆಯ 107ನೇ ಕಿ.ಮೀ. ನಿಂದ 140 ನೇ ಕಿ.ಮೀವರೆಗೆ ಅಗಲಪಡಿಸುವ ಮತ್ತು ಅಭಿವೃದ್ಧಿಪಡಿಸುವಲ್ಲಿ ಇದುವರೆವಿಗೆ 6.66 ಲಕ್ಷ ರೂ.ಗಳ ಆರ್ಥಿಕ ಪ್ರಗತಿ ಸಾಧಿಸಲಾಗಿದೆ.

ಆ) ಗುತ್ತಿಗೆದಾರರು ಸಕಾಲಕ್ಕೆ ಕಾರ್ಯನಿರ್ವಹಿಸಲು ವಿಫಲರಾಗಿರುವುದೇ ಕೆಲಸದ ವಿಳಂಬಕ್ಕೆ ಕಾರಣ. ಕಾಮಗಾರಿಯನ್ನು ಶೀಘ್ರ ಪೂರೈಸುವ ಸಲುವಾಗಿ, ಸದರಿ ಗುತ್ತಿಗೆಯನ್ನು ರದ್ದುಪಡಿಸಿದ್ದು, ಮರು ಗುತ್ತಿಗೆ ಕರೆಯಲು ಕ್ರಮ ತೆಗೆದುಕೊಳ್ಳಲಾಗಿದೆ.

ಇ) 'ಆ'ನಲ್ಲಿ ಉತ್ತರ ಸಲ್ಲಿಸಿದೆ.

ತುರುವೇಕೆರೆ ತಾಲ್ಲೂಕಿನ ಲೋಕೋಪಯೋಗಿ ಇಲಾಖೆ ವತಿಯಿಂದ ಕೈಗೊಂಡಿರುವ ಕ್ರಮಗಳು

2021 - ಶ್ರೀ ಹೆಚ್.ಬಿ. ನಂಜೇಗೌಡ (ತುರುವೇಕೆರೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ ಕೈಗೊಂಡಿರುವ ಕಾರ್ಯಕ್ರಮಗಳ ವಿವರಗಳನ್ನು ತಿಳಿಸುವಿರಾ?